ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.160-162
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೆಸಗರಹಳ್ಳಿ ರಾಮಣ್ಣನವರ 'ಅವ್ವ' ಕಥೆಯ ವಿಶ್ಲೇಷಣೆ

**ಡಾ. ಲತಾ ಆರ್**

ಕನ್ನಡ ಅತಿಥಿ ಉಪನ್ಯಾಸಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Abstract:**

*"ಆಧುನಿಕ ಕನ್ನಡ ಸಣ್ಣಕಥೆಯ ಚರಿತ್ರೆಯು ಆಧುನಿಕ ಕನ್ನಡ ಕಾದಂಬರಿಯ ಚರಿತ್ರೆಯನ್ನು ಬಹುಮಟ್ಟಿಗೆ ಹೋಲುತ್ತದೆ. ಸಣ್ಣಕಥೆ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಮೂಡಿ ಬಂದಿದ್ದು ಪಾಶ್ಚಾತ್ಯ ಸಾಹಿತ್ಯದ ಸ್ವಭಾವದಿಂದ ಎನ್ನಬೇಕು".1 ಸಣ್ಣಕಥೆಯೆಂಬುದು ಸ್ವಲ್ಪ ಸಮಯದಲ್ಲೇ ಇಡೀ ಬ್ರಹ್ಮಾಂಡವನ್ನೇ ತಿಳಿಸುತ್ತದೆ. ಕೃಷ್ಣನ ಬಾಯಲ್ಲಿ ಬ್ರಹ್ಮಾಂಡ ಕಂಡ ಯಶೋಧೆಯಂತೆ ಭಾಸವಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಬೆಸಗರಹಳ್ಳಿ ರಾಮಣ್ಣನವರ 'ಅವ್ವ' ಕಥೆಯನ್ನು ವಿಶ್ಲೇಷಿಸಲಾಗಿದೆ.*

**Keywords:** *ಬೆಸಗರಹಳ್ಳಿ ರಾಮಣ್ಣ, ಕನ್ನಡ ಕಥೆಗಳು, ಸಣ್ಣ ಕಥೆಗಳು, ಅವ್ವ.*

## ಪೀಠಿಕೆ

"ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಲೋಕಪ್ರಿಯವಾದ ರೂಪವಾಗಿದೆ. ಈ ಮಾತು ಭಾರತದ ಉಳಿದೆಲ್ಲ ಪ್ರಾಂತ್ಯಗಳ ಸಾಹಿತ್ಯಗಳಿಗೂ ಅನ್ವಯಿಸುತ್ತದೆ. ಕಥೆಯ ಬಗ್ಗೆ ಮನುಷ್ಯನಿಗಿರುವ ಜನ್ಮಜಾತವಾದ ಕುತೂಹಲವೂ ಅಲ್ಲದೆ ಸಣ್ಣಕಥೆ ಭಾವಗೀತದೊಡನೆ ಹೊಸದಾಗಿ ಬಂದ ಸಾಹಿತ್ಯ ಪ್ರಕಾರವಾಗಿರುವುದೂ ಇದಕ್ಕೆ ಕಾರಣವಾಗಿದೆ".[2]

ಬೆಸಗರಹಳ್ಳಿ ರಾಮಣ್ಣನವರ ಈ ಕಥೆ ಹೆಸರಿಗೆ ತಕ್ಕಂತೆ ತಾಯಿಯ ಮನಸ್ಸನ್ನು ವಿವರಿಸುತ್ತಾ ಹೋಗುತ್ತದೆ. ಈ ಕಥೆಯಲ್ಲಿ ಬರುವ ಪಾತ್ರಗಳೆಂದರೆ ಕೆಂಪಕ್ಕ, ಚನ್ನಣ್ಣ, ಪುಟ್ಟರಾಮ ದೇವರಾಜ, ಹಸು ಮತ್ತು ಪುಟ್ಟ, ಅವಳಿ–ಜವಳಿ ಕರುಗಳು ಮುಖ್ಯ ಪಾತ್ರವಾದರೆ, ಪೋಷಕ ಪಾತ್ರವಾಗಿ ದಲ್ಲಾಳಿ ನಿಂಗಣ್ಣ, ಶಿವಲಿಂಗೇಗೌಡರು, ವೀರಭದ್ರಯ್ಯ ಪಾತ್ರಗಳು ಮೂಡಿಬಂದಿವೆ.

ಈ ಕಥೆಯ ಸಾರಾಂಶವೆಂದರೆ ಕೆಂಪಕ್ಕನ ಮನೆಯಲ್ಲಿ ಎರಡು ಅವಳಿ–ಜವಳಿ ಕರುಗಳಿಗೆ ಹಸು ಜನ್ಮ ನೀಡಿರುತ್ತದೆ. ಆ ಕರುಗಳನ್ನು ಕೆಂಪಕ್ಕನ ಮೊಮ್ಮಗನಾದ ಪುಟ್ಟರಾಮ ಆ ಕರುಗಳನ್ನು ನೇವರಿಸುತ್ತಾ ಮುದ್ದು ಮಾಡುತ್ತಿರುತ್ತಾನೆ. ಇದನ್ನು ಕಂಡ ಕೆಂಪಕ್ಕ ಮೊಮ್ಮಗನನ್ನು ಬೆದರಿಸಿ ಕಳುಹಿಸಿ ಹೊರಬರುತ್ತಾಳೆ. ಆಗ ಹಸುವಿನ ದಳ್ಳಾಳಿಯಾದ ಕಚ್ಚೆ ನಿಂಗಣ್ಣ ಅವರ ಮನೆಗೆ ಬರುತ್ತಿರುವುದನ್ನು ಕಂಡು ಪ್ರಶ್ನಿಸುತ್ತಾಳೆ ಹಾಗೂ ಮೊಮ್ಮಗ ಪುಟ್ಟರಾಮನನ್ನು ಕೂಡ ಪ್ರಶ್ನಿಸುತ್ತಾನೆ. ಆಗ ದಳ್ಳಾಳಿ ಅವನಿಗೆ "ಲೋ! ಪುಟ್ಟರಾಮ ನಿಮ್ಮ ಹಸು–ಕರುಗೋಳ ಮಾರಬೇಕು ಅಂತ ತೀರ್ಮಾನ ಮಾಡ್ದೋಕಲ–ಎಂದ.[3] ಆಗ ಅಜ್ಜಿ ಮತ್ತು ಮೊಮ್ಮಕ್ಕಳಿಗೆ ಬೇಸರವಾಗುತ್ತದೆ. ನಂತರ ಅವರನ್ನು ಬೆದರಿಸಿ ಕಳುಹಿಸುತ್ತಾಳೆ.

ಹಸುವಿನ ದಳ್ಳಾಳಿ ತೆರಳಿದ ಮೇಲೆ ಮಗ ಚನ್ನಣ್ಣನನ್ನು ಕರೆದು ಬೈಯ್ಯುತ್ತಾಳೆ. ಆದರೂ ಕೂಡ

***Please cite this article as:*** ಲತಾ ಆರ್. (2024). ಬೆಸಗರಹಳ್ಳಿ ರಾಮಣ್ಣನವರ 'ಅವ್ವ' ಕಥೆಯ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 160–162

ತನ್ನ ಮೊಂಡುವಾದವನ್ನು ಬಿಡುವುದಿಲ್ಲ ನಂತರ ನಿನಗೆ ಸಾಕಲು ಸಾಧ್ಯವಿಲ್ಲವಾದರೆ ನಾನು ಸಾಕುತ್ತೇನೆ ಎಂದು ಕೆಂಪಕ್ಕ ಹೇಳುತ್ತಾಳೆ. ಹಸುವಿಗೂ–ಕೆಂಪಕ್ಕನಿಗೆ ಭಾವನಾತ್ಮಕವಾಗಿ ಸಂಬಂಧವಿರುತ್ತದೆ. ಏಕೆಂದರೆ ಆ ಹಸು ತನ್ನ ಸೊಸೆ ತನ್ನ ತವರಿನಿಂದ ತಂದಿರುತ್ತಾಳೆ. ಆದರೆ ಸೊಸೆ ಈಗ ಮರಣ ಹೊಂದಿರುತ್ತಾಳೆ. ಅವಳು ಸತ್ತು ಎರಡೂವರೆ ವರ್ಷ ಮಾತ್ರ ಕಳೆದಿರುತ್ತದೆ. ಸೊಸೆಯನ್ನು ಕಳೆದುಕೊಂಡಿರುತ್ತಾಳೆ. ಆದ್ದರಿಂದ ಈ ಹಸು ಕರುಗಳನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ.

'ಹಸಿವನ್ನು ಊರಿನ ಇತರ ದನಗಳೊಡನೆ ಒಳಗೆರೆಯಲ್ಲಿ ಮೇಯಲು ಬಿಟ್ಟು ಕೆಂಪಕ್ಕನ ಹಿರಿಯ ಮೊಮ್ಮಗ ದೇವರಾಜ ಓರಗೆಯ ಹುಡುಗರೊಡನೆ ಕಾಲುವೆಯ ಮರಳಿನಲ್ಲಿ ಕಪ್ಪೆಗೂಡು ಕಟ್ಟಿಗೊಂಡು ಆಟವಾಡುವುದರಲ್ಲಿ ಮಗ್ನನಾಗಿದ್ದ. ಮಳೆ ಇರುವ ಮುನ್ಸೂಚನೆಯಾಗಿ ಅಲ್ಲಲ್ಲಿ ಮುಗಿಲು ಬಿದ್ದಿದ್ದು ಇದ್ದಕ್ಕಿಂದತೆಯೇ ಧಾರಾಕಾರವಾಗಿ ಸುರಿಯಲಾರಂಭಿಸಿತು. ದೇವರಾಜ ಮಳೆಯಿಂದ ತಪ್ಪಿಸಿಕೊಳ್ಳಲು ಅಲ್ಲೆ ಇದ್ದ ಗುಡಿಯೊಳಗೆ ಹೋಗಿ ರಕ್ಷಣೆ ಪಡೆಯುತ್ತಾನೆ. ಮಳೆಯ ಜೊತೆ ಆಲಿಕಲ್ಲುಗಳು ಬೀಳುತ್ತಿದ್ದರಿಂದ ಆ ಮಳೆಯಲ್ಲಿ ಕುಣಿಯುತ್ತಿದ್ದ ನಂತರ ಹಸುಗಳ ಶಬ್ದವೂ ಕೂಡ ಕೇಳಿಸಿತು. ಮಳೆಯೂ ನಿಂತಿತು. ಆದರೆ ಹಸುಗಳು ಎಲ್ಲಿಯೂ ಕಾಣಿಸಲಿಲ್ಲ. ಎಷ್ಟೇ ಹುಡುಕಿದರೂ ಸಿಗಲಿಲ್ಲ.

ದೇವರಾಜ ಭಯದಲ್ಲಿಯೇ ಮನೆಗೆ ತೆರಳುತ್ತಾನೆ. ತನ್ನ ಅಜ್ಜಿಗೆ ಎಲ್ಲವನ್ನು ತಿಳಿಸುತ್ತಾನೆ. ನಂತರ ಅಪ್ಪ ಚನ್ನಣ್ಣನಿಗೂ ವಿಷಯ ತಿಳಿಯುತ್ತದೆ. ತನ್ನ ಮಗನಿಗೆ ಬೆದರಿಸುತ್ತಾನೆ. ಇದನ್ನು ಕಂಡ ಕೆಂಪಕ್ಕ ಮೊಮ್ಮಗನನ್ನು ಕಾಪಾಡುತ್ತಾಳೆ. ನಂತರ ಹಸುವನ್ನು ಹುಡುಕಿಕೊಂಡು ಬರಲು ಕಳುಹಿಸುತ್ತಾಳೆ.

ಚನ್ನಣ್ಣ ಹೀಗೆ ರಾತ್ರಿ ಹುಡುಕಿಕೊಂಡು ಹೋದಾಗ ಶಿವಲಿಂಗೇಗೌಡರ ಆಳು ನಿಂಗಣ್ಣ ಸಿಕ್ಕಿ ಎಲ್ಲಾವನ್ನು ತಿಳಿಸುತ್ತಾನೆ. ಮಳೆಯಲ್ಲಿ ತಪ್ಪಿಸಿಕೊಂಡು ಹೋದ ಹಸುಗಳು ಕೆರೆಮೇಗಳ ದೊಡ್ಡಿಯವರ ಕಬ್ಬಿನ ಗದ್ದೆಯಲ್ಲಿ ಮೇಯುತ್ತಿದ್ದನಂತೆ. ಅದಕ್ಕೆ ನಮ್ಮ ನಿಮ್ಮ ಹಸುಗಳನ್ನು ಕರೆದುಕೊಂಡು ಹೋಗಿದ್ದಾರೆ ಎಂದು ತಿಳಿಸುತ್ತಾನೆ. ನಂತರ ಚನ್ನಣ್ಣ ಮನೆಗೆ ಬಂದು ಎಲ್ಲಾವನ್ನು ತಿಳಿಸಿ ಮಲಗುತ್ತಾನೆ.

ಎಲ್ಲರೂ ಮಲಗಿರುವ ಸಮಯದಲ್ಲಿ ಕರುಗಳು ಅಂಬಾ ಅಂಬಾ ಎಂದು ಅರಚಿಕೊಳ್ಳುತ್ತಿರುತ್ತವೆ. ಇದನ್ನು ಕಂಡ ಕೆಂಪಕ್ಕ ತನ್ನ ಮೊಮ್ಮಕ್ಕಳಾದ ದೇವರಾಜ ಮತ್ತು ಪುಟ್ಟರಾಮನ ಮಾತಿದ್ದರು ಕೂಡ ಅವರ ಮೌನ ನಿವೇದನೆಯನ್ನು ಅರ್ಥಮಾಡಿಕೊಳ್ಳುತ್ತಾಳೆ. ಇದನ್ನು ಸಹಿಸದೆ ಚನ್ನಣ್ಣ ಗದರುತ್ತಾನೆ. ಆಗ ಚನ್ನಣ್ಣನಿಗೆ ಬೈಯ್ದು ತಾಯಿಯ ಮೌಲ್ಯವನ್ನು ತಿಳಿಸುತ್ತಾಳೆ. ಆಗ ಚನ್ನಣ್ಣನಿಗೆ ತನ್ನ ಹಿಂದಿನ ಕಥೆ ನೆನಪಾಗುತ್ತದೆ. ತನ್ನ ತಾಯಿ ಕೆಂಪಕ್ಕ ವೀರಭದ್ರಯ್ಯನ ಬಳಿ ತನ್ನ ತಂದೆ ತೆಗೆದುಕೊಂಡ ಸಾಲಕ್ಕೆ ತನ್ನನ್ನು ಜೀತಕ್ಕಾಗಿ ಇಡಲು ಹೇಳುತ್ತಾನೆ. ಆಗ ನನ್ನ ಮಗನಿಗೆ ಯಾವುದೇ ಕಷ್ಟ ಬರಬಾರದೆಂದು ಹೇಳಿ ತನ್ನ ಒಡವೆಯನ್ನು ವೀರಭದ್ರಯ್ಯನಿಗೆ ಕೊಟ್ಟು, ಚನ್ನಣ್ಣನನ್ನು ಕಾಪಾಡಿಕೊಂಡಿರುತ್ತಾಳೆ. ಇದನ್ನು ನೆನೆಸಿಕೊಂಡ ಚನ್ನಣ್ಣ ತಾಯಿಯ ನಿಸ್ವಾರ್ಥತೆಯನ್ನು ನೆನೆದು ಕಣ್ಣೀರಿಡುತ್ತಾನೆ.

ಚನ್ನಣ್ಣ ಈಗ ಎಲ್ಲವನ್ನು ನೆನೆಸಿಕೊಂಡು ಅಲ್ಲಿ ಹಸುವು ಕೂಡ ಎಷ್ಟು ಕೊರಗುತ್ತಿದೆ ಎಂದು ಚಿಂತಿಸುತ್ತಲೆ ನಿದ್ದೆಗೆ ಜಾರುತ್ತಾನೆ. ಹೀಗೆ ಎಲ್ಲರೂ ನಿದ್ದೆ ಮಾಡುತ್ತಿರುವಾಗ, ದಡ ದಡ ಎಂದು ಶಬ್ದವಾಗುತ್ತದೆ. ಇದರಿಂದ ನಿದ್ದೆಯಿಂದ ಎಚ್ಚರಗೊಂಡ. ಅದೇ ರೀತಿ ಕರುಗಳ ಅಂಬಾ ಅಂಬಾ ಸದ್ದು ಹೊರಗಡೆ ತನ್ನ ಹಸುವಿನ ಸದ್ದು, 'ಚನ್ನಣ್ಣ ದೀಪ ಹತ್ತಿಸಿ ಸರಸರನೆ ಬಾಗಿಲು ತೆಗೆದ ಬಾಗಿಲು ತೆಗೆಯುತ್ತಿದ್ದಂತೆಯೇ ಹಸು ಮಿಂಚಿನಂತೆ ಕರುಗಳ ಬಳಿ ಧಾವಿಸಿತು. ಚನ್ನಣ್ಣ ನೋಡಿದ ತನ್ನನ್ನು ಕಟ್ಟಿ ಹಾಕಿದ್ದ ಗೂಟವನ್ನು ಮುರಿದುಕೊಂಡು

ಓಡೋಡಿ ಬಂದಿದೆ. ಓಡಿ ಬರುವಾಗ ಗೂಟ ಮುಗಿಲುಗಳಿಗೆ ಬಡಿದು ಅಲ್ಲಲ್ಲಿ ರಕ್ತ ಜಿನುಗುತ್ತಿವೆ.

ಕರುಗಳು ಹಗ್ಗವೇ ಕಿತ್ತು ಬರುವಂತೆ ತುಯ್ಯಲುರಾಭಿಸಿದವು. ಚನ್ನಣ್ಣ ಅವನ್ನು ಕತ್ತಿನ ಬಳಿಯೇ ಕಳೆದುಬಿಟ್ಟ. ಅವು ಬಾಲ ಕುಣಿಸುತ್ತಾ ಕೆಚ್ಚಲಿಗೆ ಬಾಯಿ ಹಾಕಿದವು. ಓಡಿಬಂದ ದಣಿವನ್ನು ಲೆಕ್ಕಿಸದೆಯೇ ಹಸು ತನ್ನ ಕರುಗಳ ಮೈಯನ್ನು ಪ್ರೀತಿಯಿಂದ ನೆಕ್ಕಲಾರಂಭಿಸಿತು.[5]

ಈ ಕಥೆಯನ್ನು ಕುರಿತು ಹೇಳುವುದಾದರೆ ತಾಯಿಯ ಹೃದಯ ಎಂಥದ್ದು ಎಂದು ತಿಳಿಸುತ್ತದೆ. ತಾಯಿ ದೇವರನ್ನು ಮೀರಿದವಳು ಎಂಬ ಮಾತು ಎಷ್ಟು ನಿಜ ಅನಿಸುತ್ತದೆ. ಈ ಕಥೆಯಲ್ಲಿ ತಾಯಿಯನ್ನು ಕಳೆದುಕೊಂಡ ದೇವರಾಜ ಪುಟ್ಟರಾಮನ ಅನಾಥಪ್ರಜ್ಞೆಯ ಭಾವ ತಾಯಿ ನಮ್ಮ ಜೀವನಕ್ಕೆ ಎಷ್ಟು ಮಹತ್ವ ಎಂದು ತಿಳಿಸುತ್ತದೆ. ತಂದೆ ಕಳೆದುಕೊಂಡ ಚನ್ನಣ್ಣ ತನ್ನ ತಾಯಿಯ ನೆರಳಿನಲ್ಲಿ ಚೆನ್ನಾಗಿ ಬದುಕಿದ್ದಾನೆ. ದಾರಿತಪ್ಪಿದ್ದರೂ ಕೂಡ ಕೆಂಪಕ್ಕ ಅವನನ್ನು ಸರಿ ಮಾಡುತ್ತಾಳೆ. ಕೆಂಪಕ್ಕ ಅಜ್ಜಿಯಾದರೂ ಕೂಡ ಮೊಮ್ಮಕ್ಕಳಿಗೆ ತಾಯಿ ಸ್ಥಾನ ತುಂಬುತ್ತಾಳೆ. ಇಲ್ಲಿ ಹಸು ಕೂಡ ತಾನು ಮಳೆಯಿಂದ ತಪ್ಪಿಸಿಕೊಂಡು ಹೋದರೂ ತನ್ನ ಮಕ್ಕಳಿಗಾಗಿ ಹಂಬಲಿಸುತ್ತಾ ಗಟ್ಟಿಯಾಗಿ ಕಟ್ಟಿದ ಹಗ್ಗವನ್ನೆ ಕಳಚಿಕೊಂಡು ತನ್ನ ಕರುಗಳಿಗೆ ಹಾಲುಣಿಸಲು ಓಡಿ ಬರುತ್ತದೆ.

ಮನುಷ್ಯರಾಗಲಿ, ಪ್ರಾಣಿಯಾಗಲಿ, ಪಕ್ಷಿಗಳಾಗಲಿ ತಾಯಿ ಜೀವವೆಂಬುದು ಒಂದೇ ರೀತಿಯಲ್ಲಿಯೇ ವರ್ತಿಸುತ್ತವೆ. ತಾಯಿಯು ಎಂದಿಗೂ ತನ್ನ ಕೂಸುಗಳಿಗೆ ಮೋಸ ಮಾಡುವುದಿಲ್ಲ. ಮಾಡಿದರೆ ಅವಳು ತಾಯಿಯಾಗಲು ಸಾಧ್ಯವೇ ಇಲ್ಲ. ಒಟ್ಟಾರೆ ಈ ಕಥೆಯಲ್ಲಿ ಧ್ವನಿತವಾಗಿರುವ ಅಂಶವೆಂದರೆ ತಾಯಿ ಎಂಬ ಜೀವ ಎಲ್ಲಾವನ್ನು ಮೀರಿದ್ದು. ಶ್ರೇಷ್ಠತೆಯ ಭಾವವನ್ನು ಮೂಡಿಸುತ್ತದೆ.

**ಕೊನೆಟಿಪ್ಪಣಿಗಳು**


1. ಶೇಷಗಿರಿರಾವ್ ಎಲ್.ಎಸ್. (2008). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ. ಪುಟ 95.
2. ಕೀರ್ತಿನಾಥ ಕುರ್ತಕೋಟಿ. (2002). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಮನೋಹರ ಗ್ರಂಥಮಾಲಾ. ಪುಟ 133.
3. ಬೆಸಗರಹಳ್ಳಿ ರಾಮಣ್ಣ. (1986). ***ಕನ್ನಂಬಾಡಿ (ಸಮಗ್ರ ಕತೆಗಳು).*** ಪಲ್ಲವಿ ಪ್ರಕಾಶನ, ಪುಟ 133.
4. ಅದೇ. ಪುಟ 98.
5. ಅದೇ. ಪುಟ 103.